# ವಿಶ್ವನಂದಿನಿ ಲೇಖನಮಾಲೆ – 106

## ಆದಿದಂಪತಿಗಳ ಆದರ್ಶ ದಾಂಪತ್ಯ

ನಮ್ಮ ಸ್ವಾಮಿ ಶ್ರೀಕೃಷ್ಣ ಗೃಹಸ್ಥರು ಹೇಗೆ ಬದುಕಬೇಕು, ಗಂಡಹೆಂಡಿರಲ್ಲಿ ಹೇಗೆ ಪ್ರೇಮವಿರಬೇಕು ಎಂದು ತೋರಿಕೊಟ್ಟ ನಮ್ಮೆಲ್ಲರ ಪ್ರೀತಿಯ ದೇವರು.

ಒಂದು ಸಂದರ್ಭ. ಪಾಂಡವರು ಇಂದ್ರಪ್ರಸ್ಥಕ್ಕೆ ಬಂದು ರಾಜ್ಯಭಾರ ಆರಂಭಿಸಿದ ನಂತರ ರಾಜಸೂಯಯಜ್ಞವನ್ನು ಮಾಡುವದಕ್ಕಿಂತ ಮುಂಚೆ ನಡೆದ ಒಂದು ಘಟನೆ.

ಶ್ರೀಕೃಷ್ಣ ತನ್ನೆಲ್ಲ ಬಾಂಧವರಿಗೂ ದ್ವಾರಕೆಗೆ ಬರಲು ಕರೆಕಳುಹಿಸಿರುತ್ತಾನೆ. ಪಾಂಡವರು, ಕೌರವರು ಮುಂತಾಗಿ ಎಲ್ಲರೂ ನೆರೆದಿರುತ್ತಾರೆ. ಸಭೆಯ ಮಧ್ಯದಲ್ಲಿ ಶ್ರೀಕೃಷ್ಣ ರುಗ್ಮಿಣೀದೇವಿಯ ಸಮೇತನಾಗಿ ಪರಮಾತ್ಮ ಆಸ್ಥಾನವನ್ನು ಪ್ರವೇಶ ಮಾಡುತ್ತಾನೆ. ಸಿಂಹಾಸನದಲ್ಲಿಯೂ ಅವಳನ್ನೇ ಪಕ್ಕದಲ್ಲಿ ಕೂಡಿಸಿಕೊಳ್ಳುತ್ತಾನೆ. ನಾರದರು ಬಂದು

ರುಗ್ಮಿಣೀಶ್ರೀಕೃಷ್ಣರಿಗೆ ಪಾರಿಜಾತದ ಹೂವನ್ನು ಸಮರ್ಪಿಸುತ್ತಾರೆ. ಆ ಬಳಿಕ ರುಗ್ಮಿಣಿಯ ಮಾಹಾತ್ಮ್ಯವನ್ನು ಪರಮಾತ್ಮ ಆ ಸಭೆಯಲ್ಲಿ ನಾರದರ ಮುಖದಿಂದ ಸಾರಿ ಹೇಳಿಸುತ್ತಾನೆ.

ಪರಮಾತ್ಮನಿಗೆ ಎಂಟು ಜನ ಪಟ್ಟದರಾಣಿಯರು. ಅದರಲ್ಲಿ ಇಬ್ಬರು, ರುಕ್ಮಿಣೀ ಮತ್ತು ಸತ್ಯಭಾಮೆ ಇಬ್ಬರೂ ಸಾಕ್ಷಾತ್ ಲಕ್ಷ್ಮೀದೇವಿಯರೇ. ರಾಮ ಪರಶರಾಮರಿದ್ದಂತೆ, ಶ್ರೀನಿವಾಸ ವರಾಹರಿದ್ದಂತೆ ರುಕ್ಮಿಣೀ ಸತ್ಯಭಾಮೆಯರು. ಅವರಲ್ಲಿ ಎಳ್ಳಷ್ಟೂ ಭೇದವಿಲ್ಲ. ಉಳಿದ ಆರು ಜನ — ಜಾಂಬವತೀ, ನೀಲಾ, ಕಾಳಿಂದೀ, ಲಕ್ಷಣಾ, ಭದ್ರಾ, ಮಿತ್ರವಿಂದಾ — ಇವರು ದೇವತೋತ್ತಮರು. ಪಾರ್ವತೀದೇವಿಗಿಂತ ಶ್ರೇಷ್ಠ ಯೋಗ್ಯತೆಯವರು, ರುದ್ರದೇವರಿಗಿಂತ ಕಡಿಮೆಯವರು. ಅವರನ್ನುಳಿದು ಹದಿನಾರು ಸಾವಿರ ಜನ ಅಗ್ನಿಪುತ್ರರ ಅವತಾರ. ಪರಮಾತ್ಮನನ್ನು ಮದುವೆಯಾಗಬೇಕೆಂದು ಹೆಣ್ಣುಮಕ್ಕಳಾಗಿ ಅವತರಿಸಿ ಬಂದು ದಾಂಪತ್ಯದ ಸರ್ವೋತ್ತಮಸುಖವನ್ನು ಅನುಭವಿಸಿದವರು.

ಪರಮಾತ್ಮ ಇವರೆಲ್ಲರೊಟ್ಟಿಗೆ ಅದ್ಭುತವಾದ ದಾಂಪತ್ಯವನ್ನು ನಡೆಸುತ್ತಾನೆ. ಮನುಷ್ಯ ತನ್ನ ಹೆಂಡತಿಯ ಜೊತೆಯಲ್ಲಿ ಹೇಗೆ ವರ್ತಿಸಬೇಕು ಎನ್ನುವದನ್ನು ತೋರಿಸಿಕೊಡುತ್ತಾನೆ. ಪರಮಾತ್ಮನ ವಿಡಂಬನೆಯಲ್ಲಿ ಅವನ ಮನಸ್ಸನ್ನರಿತ ಆ ಜಗದಂಬಿಕೆಯರೂ ವಿಡಂಬನೆ ಮಾಡುತ್ತಾರೆ.

ರುಕ್ಮಿಣೀ ಸಾಧುಸ್ವಭಾವದ ಗುಣಗಳನ್ನು ಪ್ರಕಟ ಮಾಡಿದರೆ, ಸತ್ಯಭಾಮೆ ಪ್ರಮದೆಯರ ಸ್ವಭಾವವನ್ನು ಪ್ರಕಟ ಮಾಡುತ್ತಾಳೆ. ಪ್ರಮದೆ ಎಂದರೆ ಸಾತ್ತ್ವಿಕವಾದ ಸೊಕ್ಕುಳ್ಳವಳು ಎಂದರ್ಥ. ಸರಿಯಾಗಿ ಹೇಳಬೇಕೆಂದರೆ ಆತ್ಮಾಭಿಮಾನದ ಹೆಣ್ಣುಮಗಳು. ಹೆಂಗಸಿಗೆ ಈ ರೀತಿಯ ಅಭಿಮಾನವಿದ್ದರೆ ಅವಳ ಸೌಂದರ್ಯ ಇಮ್ಮಡಿಯಾಗುತ್ತದೆ. ಅದು ಕಂಡಕಂಡವರ ಮುಂದೆ ತೋರಿಸುವ ಸೊಕ್ಕಲ್ಲ. ತನ್ನನ್ನು ಪ್ರಾಣದಂತೆ ಪ್ರೀತಿಸುವ, ತನ್ನ ಅಭಿಮಾನ, ಮದವನ್ನು ಅರ್ಥ ಮಾಡಿಕೊಳ್ಳಬಲ್ಲ ಗಂಡನ ಮುಂದೆ ಮಾತ್ರ ತೋರಿಸುವ ಸೊಕ್ಕು. ಅದೇ ಸೊಕ್ಕನ್ನು ಇನ್ನೊಬ್ಬರ ಮುಂದೆ ತೋರಿದರೆ ಅದು ದುರಹಂಕಾರವಾಗುತ್ತದೆ, ಅವಳು ಬಜಾರಿ

ಎನಿಸಿಕೊಳ್ಳುತ್ತಾಳೆ. ಹೀಗಾಗಿ ಮದಕ್ಕೂ, ಪ್ರಮದಕ್ಕೂ ಒಂದು ಕೂದಲೆಳೆಯಷ್ಟು ಸೂಕ್ಷ್ಮವಾದ ಅಂತರವಿದೆ.

ಮೇಲಿನ ಘಟನೆ ಮುಗಿದ ನಂತರ ಪರಮಾತ್ಮ ಸತ್ಯಭಾಮೆಯ ಮನೆಗೆ ಬರುತ್ತಾನೆ. ಸತ್ಯಭಾಮೆ ಹುಸಿಮುನಿಸು ತೋರಿಸುತ್ತಿರುತ್ತಾಳೆ. ಅವಳ ಮನಸು ಹುಸಿಯಾದದ್ದು ಎಂದರಿತ ಕೃಷ್ಣ ಅವಳನ್ನು ರಮಿಸಲು ಆರಂಭಿಸುತ್ತಾನೆ. ಮನುಷ್ಯನಿಗೆ ಈ ಸೂಕ್ಷ್ಮಗಳು ತಿಳಿದಿರಬೇಕು. ಕೆಲವು ಬಾರಿ ಹೆಂಡತಿ ಗಂಡನನ್ನು, ಗಂಡ ಹೆಂಡತಿಯನ್ನು ಕಾಡಿಸುತ್ತಾರೆ. ಆ ಕಾಡುವಿಕೆಯ ಹಿಂದಿನ ಪ್ರೇಮವನ್ನು ಅರ್ಥ ಮಾಡಿಕೊಂಡು ಅವರು ಅದನ್ನು ಆನಂದಿಸಬೇಕು. ಅದು ಬಿಟ್ಟು ಮಾರಾಮಾರಿ ಜಗಳಕ್ಕಿಳಿಯಬಾರದು.

ನಮ್ಮ ಜಾಣ ಶ್ರೀಕೃಷ್ಣ, “ಯಾಕೇ, ಕೋಪಗೊಂಡಿದ್ದೀ ಏನಾಯ್ತೇ, ಏನು ಬೇಕೆ”  ಎಂದು ರಮಿಸಲಾರಂಭಿಸುತ್ತಾನೆ. ಸತ್ಯಭಾಮೆ ಮತ್ತಷ್ಟು ಸಿಟ್ಟು ತೋರುತ್ತಾಳೆ. ಕೃಷ್ಣ ಮತ್ತಷ್ಟು ರಮಿಸುತ್ತಾನೆ. ರಮಿಸಿರಮಿಸಿ ಕಾರಣ ತಿಳಿಯುತ್ತಾನೆ.

ರುಗ್ಮಿಣಿಯನ್ನು ಮಾತ್ರ ಸಭೆಯಲ್ಲಿ ಕರೆದುಕೊಂಡು ಹೋಗಿ ಸಿಂಹಾಸನದಲ್ಲಿ ಕೂಡಿಸಿಕೊಂಡದ್ದೂ, ಮತ್ತು ನಾರದರು ಪಾರಿಜಾತದ ಹೂವನ್ನು ತಂದುಕೊಟ್ಟದ್ದೂ ಸತ್ಯಭಾಮೆಯ ಪ್ರೇಮಕಲಹಕ್ಕೆ ಕಾರಣ ಎಂದು ಅವಳ ಬಾಯಿಂದಲೇ ಹೇಳಿಸುತ್ತಾನೆ. ಹೇಳಿಸಿ, “ಅಯ್ಯೋ, ಬಂಗಾರದ ಹೆಣ್ಣೆ, ಇಷ್ಟಕ್ಕೆ ಯಾಕೆ ಚಿಂತೆ ಮಾಡುತ್ತಿ, ನಿನಗೆ ಪಾರಿಜಾತದ ಮರವನ್ನೇ ತಂದುಕೊಡುತ್ತೇನೆ ಸುಮ್ಮನಿರು” ಎನ್ನುತ್ತಾನೆ. ಸತ್ಯಭಾಮೆ ಸುಮ್ಮನಿರುವದಿಲ್ಲ. ತಂದುಕೊಂಡು ಎಂದು ಪಟ್ಟುಹಿಡಿದು ಕೂಡುತ್ತಾಳೆ. ತನ್ನ ಗಂಡನ ಅನಂತಸಾಮರ್ಥ್ಯದ ಅರಿವಿದ್ದ ಸತ್ಯಭಾಮೆ ದೇವಲೋಕದ ಪಾರಿಜಾತದ ಮರವನ್ನೇ ತಂದುಕೊಡು ಎಂದು ಕೇಳಿಯೇ ಬಿಡುತ್ತಾಳೆ.

ಅದೇ ಸಮಯಕ್ಕೆ ಸರಿಯಾಗಿ, ಮುನಿಗಳು ಮತ್ತು ಇಂದ್ರ ಬಂದು ನರಕಾಸುರನ ಉಪಟಳವನ್ನು ಕೃಷ್ಣನ ಮುಂದೆ ನಿವೇದಿಸಿಕೊಳ್ಳುತ್ತಾರೆ. ಆ ರಾಕ್ಷಸನನ್ನು ಕೊಲ್ಲಲು ಪ್ರಾರ್ಥಿಸುತ್ತಾರೆ. ಅವರಿಗೆ ಅಭಯವಿತ್ತ ನಮ್ಮ ಜಾಣಕೃಷ್ಣ ನೇರವಾಗಿ ಸತ್ಯಭಾಮೆಯ ಮನೆಗೆ ಬರುತ್ತಾನೆ. ಬಂದವನೇ,

“ಸತ್ಯಾ, ರುಗ್ಮಿಣಿಯನ್ನು ಸಿಂಹಾಸನದ ಮೇಲೆ ಕೂಡಿಸಿಕೊಂಡದ್ದಕ್ಕೆ ತಾನೇ ನಿನಗೆ ಸಿಟ್ಟು. ನಿನಗೆ ಅದಕ್ಕಿಂತ ಮಿಗಿಲಾದ ಸ್ಥಾನ ಕೊಡುತ್ತೇನೆ ಬಾ. ಎಲ್ಲ ರಾಜರೂ ತಾವು ಸಭೆಯಲ್ಲಿ ಸಿಂಹಾಸನದಲ್ಲಿ ಪತ್ನಿಯನ್ನು ಕೂಡಿಸಿಕೊಂಡರೆ ನಿನ್ನನ್ನು ನಾನು ಯುದ್ಧರಂಗಕ್ಕೆ ಕರೆದುಕೊಂಡು ಹೋಗುತ್ತೇನೆ, ಬಾ. ಕ್ಷತ್ರಾಣಿ ನೀನು, ಯದುವೀರ ಸತ್ರಾಜಿತನ ಮಗಳು ನೀನು, ನನ್ನ ಮಡದಿ ಹೀಗಾಗಿ ನಿನಗೆ ವೀರೋಚಿತವಾದ ಸ್ಥಾನ ಕೊಡುತ್ತೇನೆ ಬಾ” ಎಂದು ಹುರಿದುಂಬಿಸುತ್ತಾನೆ, ತಾನಾಗಿ ಒದಗಿ ಬಂದ ಘಟನೆಯನ್ನು ಚನ್ನಾಗಿ ಉಪಯೋಗಿಸುವ ಜಾಣಕೃಷ್ಣ.

ಸತ್ಯಭಾಮೆ ಹಿರಿದಾದ ಸಂತಸದಿಂದ ಯುದ್ಧಕ್ಕೆ ತಯಾರಾಗಿ ನಿಲ್ಲುತ್ತಾಳೆ. ವೀರಗಚ್ಚೆಯನ್ನು ಹಾಕಿ, ಕವಚವನ್ನು ಧರಿಸಿ, ತಲೆಗೆ ಉಷ್ಣೀಷವನ್ನು ತೊಟ್ಟು ಕೃಷ್ಣನೊಡನೆ ಹಕ್ಕಿಯ ಹೆಗಲೇರಿ ಯುದ್ಧಕ್ಕೆ ಹೊರಡುತ್ತಾಳೆ. ತಾನಾಗಿ ಬಂದ ಘಟನೆಯನ್ನು ಉಪಯೋಗಿಸಿದರೂ ಅದರಲ್ಲಿ ಪ್ರಾಮಾಣಿಕತೆ ಇರಬೇಕೆಂದು ಕೃಷ್ಣ ಈ ಸಂದರ್ಭದಲ್ಲಿ ಸಾರಿ ಹೇಳುತ್ತಾನೆ, ನರಕನೊಡನೆ ಯುದ್ದ ಮಾಡುವಾಗ

ತನಗೆ ಬಳಲಿಕೆಯೇ ಇಲ್ಲದಿದ್ದರೂ ಯುದ್ಧದಿಂದ ಬಳಲಿದವನಂತೆ ವಿಡಂಬನೆ ಮಾಡುತ್ತಾನೆ. ಆಗ ನರಕ ಅಸ್ತ್ರವೊಂದನ್ನು ಪ್ರಯೋಗಿಸಿದರೆ, ತಾಯಿ ಸತ್ಯಭಾಮೆ ತಾನೇ ಧನುಷ್ಯಕ್ಕೆ ಬಾಣ ಹೂಡಿ ಆ ಅಸ್ತ್ರವನ್ನು ನಿವಾರಿಸುತ್ತಾಳೆ. ಕೃಷ್ಣ ಸಂತೋಷದಿಂದ ಅವಳನ್ನು ಆಲಂಗಿಸಿ, ನೋಡಿದೆಯಾ, ನೀನು ಬರದಿದ್ದರೆ ನನ್ನ ಗತಿಯೇನಾಗುತ್ತಿತ್ತು ಎಂದು ಅವಳನ್ನು ಮತ್ತೆ ರಮಿಸಿ ಆ ನರಕನನ್ನು ಕೊಂದು ಹಾಕುತ್ತಾನೆ.

ಈ ನರಕಾಸುರ ದೇವತೆಗಳ ತಾಯಿ ಅದಿತಿಯ ಓಲೆಗಳನ್ನು ಅಪಹಾರ ಮಾಡಿಕೊಂಡು ಬಂದಿರುತ್ತಾನೆ. ಅದನ್ನು ತಾಯಿಗೆ ಹಿಂತಿರುಗಿಸಲು ದೇವಲೋಕಕ್ಕೆ ಹೋಗಬೇಕಾಗುತ್ತದೆ. ಸತ್ಯಭಾಮೆಯ ಜೊತೆಯಲ್ಲಿಯೇ ಗರುಡವಾಹನನಾಗಿ ಶ್ರೀಕೃಷ್ಣ ಇಂದ್ರನ ಅಮರಾವತಿಗೆ ಹೋಗುತ್ತಾನೆ. ಅಲ್ಲಿನ ನಂದನವನದಲ್ಲಿ ಪರಮಾದ್ಭುತವಾಗಿ ವಿಹಾರ ಮಾಡಿ ಸತ್ಯಭಾಮೆಯನ್ನು ಸಂತೋಷಪಡಿಸುತ್ತಾನೆ. ದೇವಲೋಕದ ಪಾರಿಜಾತವೃಕ್ಷದ ಬಳಿ ಇದ್ದಾಗ, ಸತ್ಯಭಾಮೆ ಕೇಳಿಯೇ ಬಿಡುತ್ತಾಳೆ, ಸ್ವಾಮಿ,

ಪಾರಿಜಾತದ ವೃಕ್ಷ ಇಲ್ಲಿದೆ. ಇದನ್ನು ನೀಡುತ್ತೇನೆ ಎಂದು ಹೇಳಿದ್ದಿರಿ. ಈಗ ಒಯ್ದು ನನ್ನ ಮನೆಯ ಅಂಗಳದಲ್ಲಿ ಅದನ್ನು ನೆಡಿ ಎಂದು. ನಲ್ಮೆಯ ಮಡದಿಯ ಮಾತಿನಂತೆ ಶ್ರೀಕೃಷ್ಣ ಪಾರಿಜಾತದ ಮರವನ್ನು ಬುಡಸಮೇತ ಕಿತ್ತು ಗರುಡನ ಮೇಲಿಡುತ್ತಾನೆ.

ಪಾರಿಜಾತದ ವೃಕ್ಷವನ್ನು ಕಳೆದುಕೊಂಡ ದುಃಖದಲ್ಲಿ ದೇವತೆಗಳು ಅಸುರರ ಆವೇಶಕ್ಕೊಳಗಾಗುತ್ತಾರೆ. ಶ್ರೀಕೃಷ್ಣ ತಮ್ಮೊಡೆಯ ಎನ್ನುವದನ್ನೂ ಮರೆತು ಯುದ್ಧ ಸಾರುತ್ತಾರೆ. ಶ್ರೀಕೃಷ್ಣ ದೇವತೆಗಳನ್ನೂ ನಿರಾಯಾಸವಾಗಿ ಸೋಲಿಸಿದಾಗ ಅವರಿಗೆ ಅರಿವು ಮೂಡುತ್ತದೆ. ಆಗ ಸತ್ಯಭಾಮೆ ಶ್ರೀಕೃಷ್ಣರಿಗೆ ನಮಸ್ಕರಿಸಿ, ನಿಮ್ಮ ಮಕ್ಕಳು ನಾವು, ಹುಡುಗಾಟ ತೋರಿದೆವು ಕ್ಷಮಿಸಿ ಎನ್ನುತ್ತಾರೆ. ಅವರನ್ನು ಕ್ಷಮಿಸಿ ಹರಿಸಿದ ಕೃಷ್ಣ ಸತ್ಯಭಾಮೆಯರು ದ್ವಾರಕೆಗೆ ಹಿಂತಿರುಗುತ್ತಾರೆ.

ಶ್ರೀಕೃಷ್ಣ ಸತ್ಯಭಾಮೆಯ ಮನೆಯ ಅಂಗಳದಲ್ಲಿ ಪಾರಿಜಾತವನ್ನು ನೆಡುತ್ತಾನೆ. ಆ ಪಾರಿಜಾತದ

ಪುಷ್ಪಗಳಿಂದ ಸತ್ಯಭಾಮೆ ಶ್ರೀಕೃಷ್ಣನನ್ನು ಅರ್ಚಿಸುತ್ತಾಳೆ.

ಜಗತ್ತಿನಲ್ಲಿ ವಿವಿಧ ರೀತಿಯ ಗಂಡಹೆಂಡಿರುತ್ತಾರೆ. ಅವರಿಬ್ಬರ ಮಧ್ಯದಲ್ಲಿ ಪ್ರೀತಿ ಎನ್ನುವ ವಸ್ತುವಿದ್ದಾಗ ಯಾವ ಜಗಳವೂ ಅವರನ್ನು ಬೇರ್ಪಡಿಸುವದಿಲ್ಲ. ಅಷ್ಟೇ ಅಲ್ಲ, ಹುಸಿಮುನಿಸುಗಳು, ಪ್ರೇಮಕಲಹಗಳು ಅವರಿಬ್ಬರ ಮಧ್ಯದಲ್ಲಿನ ವಿಶ್ವಾಸವನ್ನು ಮತ್ತಷ್ಟು ಹೆಚ್ಚು ಮಾಡುತ್ತವೆ ಎನ್ನುವದನ್ನು ಜಗತ್ತಿನ ತಂದೆತಾಯಿಯರು ಅಭಿನಯಿಸಿ ತೋರಿಸಿದ್ದಾರೆ.

ಸಜ್ಜನರ ದಾಂಪತ್ಯ ಸುಖಮಯವಾಗಿರಲಿ. ಅವರ ಮನೆಯಲ್ಲಿ ಯಾವಾಗಲೂ ಸುಖ ಸಂತಸಗಳು ಮನೆಮಾಡಿರಲಿ ಎಂದು ಆ ರುಗ್ಮಿಣೀ-ಸತ್ಯಭಾಮಾ ಸಮೇತ ಮೂಲಗೋಪಾಲಕೃಷ್ಣನನ್ನು ಆದರದಿಂದ ಪ್ರಾರ್ಥಿಸುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491